ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 22-03-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ : ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Ground Water Conference under Jal Kranthi Abhiyan**<br><br>**Inauguration:**<br><br>**Shri H. G. Shivananda Murthy, Commissioner, Department of Watershed Development** | **23–03–2016**<br>**Wednesday**<br>**10-30 AM** | **North Block Auditorium, University of Agricultural Sciences Gandhi Krishi Vignana Kendra, Bengaluru.** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

### ಮಾರ್ಚ್ 30 ರಂದು ಆಯವ್ಯಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಉತ್ತರ

ಬೆಂಗಳೂರು, ಮಾರ್ಚ್ 22 (ಕರ್ನಾಟಕ ವಾರ್ತೆ) :

ರಾಜ್ಯ ವಿಧಾನ ಸಭೆಯಲ್ಲಿ ಮಂಡಿಸಿದ 2016–17 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮಾರ್ಚ್ 30 ರಂದು ಉತ್ತರ ನೀಡಲಿದ್ದಾರೆ ಎಂದು ರಾಜ್ಯ ವಿಧಾನಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಅವರು ಸದನದಲ್ಲಿ ಮಂಗಳವಾರ ಪ್ರಕಟಿಸಿದರು.

ಸೋಮವಾರ ನಡೆದ ವಿಧಾನಸಭೆ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಮಾರ್ಚ್ 29 ರವರೆಗೆ ಆಯವ್ಯಯದ ಮೇಲೆ ಚರ್ಚೆಗೆ ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದೆ. ಆಯವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಮುಖ್ಯಮಂತ್ರಿ ಮಾರ್ಚ್ 30 ರಂದು ಉತ್ತರಿಸಲಿದ್ದಾರೆ. ತದನಂತರ ಅದೇ ದಿನದಂದು ಧನ ವಿನಿಯೋಗ ವಿಧೇಯಕ ಹಾಗೂ ಸಂಬಂಧಿತ ವಿಧೇಯಕಗಳನ್ನು ಅಂಗೀಕಾರ ಪಡೆಯಲು ಮಂಡಿಸಲಾಗುವುದು. ಪ್ರಸ್ತುತ ಅಧಿವೇಶನದಲ್ಲಿ ಪೂರಕ ಅಂದಾಜುಗಳ ಮಂಡನೆ, ಚರ್ಚೆ ಹಾಗೂ ಅಂಗೀಕಾರವಾಗಲಿದೆ. ಅಧಿವೇಶನದ ಅವಧಿಯಲ್ಲಿ ಇತರೆ ವಿಧೇಯಕಗಳು ಬಂದಲ್ಲಿ ಅವುಗಳ ಮಂಡನೆ, ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು ಎಂದು ಸಭಾಧ್ಯಕ್ಷರು ಸದನದಲ್ಲಿ ತಿಳಿಸಿದರು.

ಡಿಪಿಎಂ:ಬಾಬು:ಜಿಪಿಆರ್.

## ಲೋಕಾಯುಕ್ತ ದುರ್ಬಲಗೊಳಿಸುವುದಿಲ್ಲ : ಸಿದ್ದರಾಮಯ್ಯ

**ಬೆಂಗಳೂರು, ಮಾರ್ಚ್ 22 (ಕರ್ನಾಟಕ ವಾರ್ತೆ) :**

ಭ್ರಷ್ಟಾಚಾರ ನಿಗ್ರಹ ದಳದ ರಚನೆಯ ಮೂಲಕ ಕರ್ನಾಟಕ ಲೋಕಾಯುಕ್ತವನ್ನು ಮತ್ತಷ್ಟು ಸಬಲಗೊಳಿಸಲಾಗುವುದೇ ಹೊರತು ದುರ್ಬಲಗೊಳಿಸಲಾಗುವುದಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯ ವಿಧಾನಸಭೆಯಲ್ಲಿ ಮಂಗಳವಾರ ಪ್ರಕಟಿಸಿದರು.

ರಾಜ್ಯದಲ್ಲಿ 1984 ರಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆ ರಚಿಸಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲಿರುವ ಪೊಲೀಸ್ ವಿಭಾಗವನ್ನು ಮುಂದುವರೆಸಲಾಗುವುದು. ಅಂತೆಯೇ, 1984 ರ ಲೋಕಾಯುಕ್ತ ಕಾಯಿದೆಯೂ ಮುಂದುವರೆಯಲಿದೆ.

ಅಲ್ಲದೆ, ಕಾರ್ಯಕಾರಿ ಆದೇಶದ ಮೂಲಕ ಪೊಲೀಸರಿಗೆ ಹೆಚ್ಚುವರಿ ಅಧಿಕಾರ ನೀಡಲಾಗಿದೆಯೇ ಹೊರತು ಲೋಕಾಯುಕ್ತದ ಅಧಿಕಾರ ಮೊಟಕುಗೊಳಿಸಿಲ್ಲ. ಆದಕಾರಣ, ಭ್ರಷ್ಟಾಚಾರ ನಿಗ್ರಹ ದಳವನ್ನು ಸದುದ್ದೇಶದಿಂದ ಮಾಡಿದ್ದೇವೆ. ಲೋಕಾಯುಕ್ತವನ್ನು ದುರ್ಬಲಗೊಳಿಸಲು ಅಲ್ಲ. ಕೇಂದ್ರ ಸರ್ಕಾರದಲ್ಲಿ ಲೋಕಪಾಲ್ ಇದೆ ಹಾಗೂ ಕೇಂದ್ರ ತನಿಖಾ ದಳವೂ ಇದೆ.

ಭ್ರಷ್ಟಾಚಾರ ನಿಗ್ರಹ ದಳದ ರಚನೆಯ ಉದ್ದೇಶ. ಭ್ರಷ್ಟಾಚಾರ ತೊಡೆದು ಹಾಕಲು ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಇದರಲ್ಲಿ ಯಾವುದೇ ರಾಜಿ ಇಲ್ಲ. ಹೊಸ ಸಂಸ್ಥೆ ಯಾರದೇ ರಕ್ಷಣೆಗಾಗಿ ರಚನೆಯಾಗಿಲ್ಲ. ಸದನಕ್ಕೂ ಈ ಸಂಸ್ಥೆ ಉತ್ತರದಾಯತ್ವ ಇದೆ. ಭ್ರಷ್ಟಾಚಾರ ನಿಗ್ರಹ ದಳ ರಚನೆಯ ಪ್ರಸ್ತಾವವನ್ನು ಹಿಂದಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ ಎಂದು ಶ್ರೀ ಸಿದ್ದರಾಮಯ್ಯ ಅವರು ರಾಜ್ಯ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಡಿಪಿಎಂ:ಬಾಬು:ಜಿಪಿಆರ್.